# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-06

**ಸಂ/ಕರಾಮುವಿ/ಪವಿ/ಯುಜಿ-5/2009-10** **ದಿನಾಂಕ:-21-09-2015**

## ಸುತ್ತೋಲೆ

**ವಿಷಯ**:- ನವೆಂಬರ್/ಡಿಸೆಂಬರ್-2015ರಲ್ಲಿ ನಡೆಯಅರುವ ಬಿ.ಎ/ಬಿ.ಕಾಂ ಪದವಿ ಪೂರಕ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸುವ ಬಗೆಗೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ 2015ರ ನವೆಂಬರ್/ಡಿಸೆಂಬರ್ ಮಾಹೆಯಲ್ಲಿ ನಡೆಯುವ ಪದವಿ ಪೂರಕ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿವೆ:

**ಪ್ರಥಮ ಬಾರಿಗೆ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪೂರ್ಣ ಪರೀಕ್ಷೆಗೆ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು.**

**ಬಿ.ಎ/ಬಿ.ಕಾಂ ಪರೀಕ್ಷೆಗಳು 2015ರ ಮಾಹೆಯ ನವೆಂಬರ್ ಮೂರನೇ ವಾರದಲ್ಲಿ ಪ್ರಾರಂಭವಾಗಲಿವೆ.**

| | |
|---|---|
| ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ಕಡೆಯ ದಿನಾಂಕ | 26-10-2015 |
| 200 ರೂ. ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು ಕಡೆಯ ದಿನಾಂಕ | 30-10-2015 |

**ಬಿ.ಎ/ಬಿ.ಕಾಂ ಪರೀಕ್ಷಾ ಶುಲ್ಕದ ವಿವರ**

| ಕ್ರಮ ಸಂಖ್ಯೆ | ತರಗತಿ | ಪೂರ್ಣ ಪರೀಕ್ಷೆಗೆ | ಒಂದು ಪತ್ರಿಕೆಗೆ | ಎರಡು ಪತ್ರಿಕೆಗಳಿಗೆ | ಮೂರು ಪತ್ರಿಕೆಗಳಿಗೆ | ನಾಲ್ಕು ಪತ್ರಿಕೆಗಳಿಗೆ | ಐದು ಮತ್ತು ಅದಕ್ಕೂ ಹೆಚ್ಚಿನ ಪತ್ರಿಕೆಗಳಿಗೆ |
|---|---|---|---|---|---|---|---|
| 1 | 1 ನೇ ಬಿ.ಎ/ಬಿ.ಕಾಂ | 850-00 | 450-00 | 500-00 | 600-00 | 700-00 | 850-00 |
| 2 | 2 ನೇ ಬಿ.ಎ/ಬಿ.ಕಾಂ | 850-00 | 450-00 | 500-00 | 600-00 | 700-00 | 850-00 |
| 3 | 3 ನೇ ಬಿ.ಎ/ಬಿ.ಕಾಂ | 950-00 | 450-00 | 500-00 | 600-00 | 700-00 | 950-00 |

**ಸೂಚನೆ**: ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಮಗಳ ಪ್ರಕಾರ ಬಿ.ಎ/ಬಿ.ಕಾಂ ಪದವಿಗೆ ಪ್ರವೇಶಾತಿ ಪಡೆದ 6(ಆರು) ವರ್ಷದೊಳಗಿನವರು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ. ಪ್ರವೇಶ ಪಡೆದು 6(ಆರು) ವರ್ಷ ಮೀರಿದ ವಿದ್ಯಾರ್ಥಿಗಳಿಗೆ ಯಾವುದೇ ಸಂದರ್ಭದಲ್ಲಿಯೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ. **ಒಂದೊಮ್ಮೆ ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದಲ್ಲಿ, ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸುವುದಿಲ್ಲ.** 2008-09 (ಸದರಿ ಸಾಲಿನ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದ ಜೊತೆ ಹೆಚ್ಚುವರಿ ಶುಲ್ಕ ರೂ 2000/- ಪಾವತಿಸಿ ಪರೀಕ್ಷೆ ಬರೆಯಲು ಅಂತಿಮ ಅವಕಾಶ) ಹಾಗೂ ನಂತರ ನೋಂದಣಿಯಾದ ವಿದ್ಯಾರ್ಥಿಗಳು ಮಾತ್ರ 2015ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.

**ನವೆಂಬರ್/ಡಿಸೆಂಬರ್ -2015 ರ ಪೂರಕ ಪರೀಕ್ಷೆಗಳನ್ನು ಈ ಕೆಳಕಂಡ ಕೇಂದ್ರಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ.**

**ಮೈಸೂರು, ಚಾಮರಾಜನಗರ, ಕೊಳ್ಳೇಗಾಲ, ಹಾಸನ, ಉಡುಪಿ, ಕಾರವಾರ, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು, ,ದಾವಣಗೆರೆ, ಗದಗ, ಚಿತ್ರದುರ್ಗ,ಬಳ್ಳಾರಿ, ವಿಜಯಪುರ (ಬಿಜಾಪುರ), ಧಾರವಾಡ, ಬೆಳಗಾವಿ, ಕಲಬುರ್ಗಿ(ಗುಲ್ಬರ್ಗ), ಬೀದರ್, ರಾಯಚೂರು, ಮಂಗಳೂರು, ಮಂಡ್ಯ, ಕೋಲಾರ. ತುಮಕೂರು, ಕುಶಾಲನಗರ.**

ಪ್ರಥಮ ಬಾರಿ ಪರೀಕ್ಷೆ ತೆಗದುಕೊಳ್ಳುವ ವಿದ್ಯಾರ್ಥಿಗಳು ಈ ಮೇಲ್ಕಂಡ ಕೇಂದ್ರಗಳ ಪೈಕಿ ಒಂದನ್ನು ಆಯ್ಕೆ ಮಾಡಬೇಕು ಹಾಗೂ ಈಗಾಗಲೇ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳು ಈ ಹಿಂದೆ ಪರೀಕ್ಷೆ ಬರೆದಿರುವ ಪರೀಕ್ಷಾ ಕೇಂದ್ರದಲ್ಲೇ ಪರೀಕ್ಷೆಗಳನ್ನು ಕಡ್ಡಾಯವಾಗಿ ಬರೆಯಬೇಕು. ಒಂದು ವೇಳೆ ಅನಿವಾರ್ಯವಾಗಿ ಪರೀಕ್ಷಾ ಕೇಂದ್ರ ಬದಲಿಸಬೇಕಾದಲ್ಲಿ, 15 ದಿನಗಳ ಮುಂಚೆ ಕುಲಸಚಿವ(ಪ)ರವರ ಪೂರ್ವಭಾವಿ ಲಿಖಿತ ಸಮ್ಮತಿ ಪಡೆದು ಕೇಂದ್ರ ಬದಲಾವಣೆ ಶುಲ್ಕ **ರೂ.1000/-(ರೂ. ಒಂದು ಸಾವಿರ ಮಾತ್ರ)ಗಳನ್ನು ವಿವಿನಿಲಯದ ಪರೀಕ್ಷಾ ನಿಧಿಗೆ ಪರೀಕ್ಷಾ ಶುಲ್ಕ ಹಾಗೂ ದಂಡ ಶುಲ್ಕದೊಂದಿಗೆ ದಿನಾಂಕ:30.10.2015ರೊಳಗೆ ಪಾವತಿಸಿ ನಂತರ ಬದಲಿಸಿದ ಕೇಂದ್ರದಲ್ಲಿ ಪರೀಕ್ಷೆ ಬರೆಯಬಹುದು.**

ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ಒದಗಿಸಿರುವ ಪರೀಕ್ಷಾ ಅರ್ಜಿ ಚಲನ್ ಪ್ರತಿಯಲ್ಲಿ ಶುಲ್ಕವನ್ನು ಹತ್ತಿರದ **ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ** ಶಾಖೆಯಲ್ಲಿ ಪಾವತಿಸುವುದು ಹಾಗೂ ಪರೀಕ್ಷಾ ಅರ್ಜಿಯಲ್ಲಿ ನೋಂದಣಿ ಸಂಖ್ಯೆ, ಪರೀಕ್ಷಾ ಕೇಂದ್ರದ ಹೆಸರನ್ನು ಸ್ಪಷ್ಟವಾಗಿ ಬರೆದು, ಶುಲ್ಕ ಪಾವತಿಸಿರುವ ಮೂಲ ಚಲನ್ ಪ್ರತಿಯನ್ನು ಪರೀಕ್ಷಾ ಅರ್ಜಿಯಿಂದ ಬೇರ್ಪಡಿಸಬಾರದು.

**ವಿದ್ಯಾರ್ಥಿಗಳು ಭರ್ತಿ ಮಾಡಿದ ಪರೀಕ್ಷಾ ಅರ್ಜಿಗಳನ್ನು ತಪ್ಪದೇ ಕುಲಸಚಿವ (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು-570006, ಇವರಿಗೆ ಖುದ್ದಾಗಿ ಸಲ್ಲಿಸಲು ಅಥವಾ ನೋಂದಣಿ ಅಂಚೆ / ಕೊರಿಯರ್ ಮೂಲಕ ಕಳುಹಿಸಿಕೊಡಲು ಸೂಚಿಸಲಾಗಿದೆ.**

**ದಿನಾಂಕ:-30-10-2015 ರ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ಕಾರಣ ನೀಡದೆ ತಿರಸ್ಕರಿಸಲಾಗುವುದು. ಹಾಗೂ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ. ಪರೀಕ್ಷೆಗಳು ಪ್ರಾರಂಬವಾಗುವ ಕೆಲವೆ ಕ್ಷಣಗಳಲ್ಲಿ ಪರೀಕ್ಷಾ ಮುಖ್ಯಾಧೀಕ್ಷರಿಗೆ ಮಾಹಿತಿ ನೀಡದೆ ಪರೀಕ್ಷೆ ಬರೆದರೆ ವಿದ್ಯಾರ್ಥಿಗಳೆ ನೇರ ಹೊಣೆಗಾರರಾಗುತ್ತಾರೆ**

### ವಿದ್ಯಾರ್ಥಿಗಳಿಗೆ ಸೂಚನೆಗಳು

01. ಯಾವುದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾರ್ಥಿಗಳ ಒಟ್ಟು ಸಂಖ್ಯೆಯು 50ಕ್ಕೂ ಕಡಿಮೆ ಇದ್ದ ಪಕ್ಷದಲ್ಲಿ, ಆ ಕೇಂದ್ರದ ವಿದ್ಯಾರ್ಥಿಗಳನ್ನು ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು. ಈ ವಿಚಾರವನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ತಿಳಿಸಲಾಗುವುದು.
02. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
03. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿ ಸೌಲಭ್ಯ ಪಡೆಯಲು ತಾವು ಪ್ರವೇಶಾತಿ ಪಡೆದ ಸಾಲಿನಲ್ಲಿಯೇ ಕಡ್ಡಾಯವಾಗಿ ವಾರ್ಷಿಕ ಪರೀಕ್ಷೆ ಬರೆದು ತೇರ್ಗಡೆಯಾಗಿರಬೇಕು. ಪ್ರವೇಶ ಪಡೆದ ಸಾಲಿನಲ್ಲಿಯೇ ಹಾಗೂ ವ್ಯಾಸಂಗಾವಧಿಯಲ್ಲಿಯೇ ಪರೀಕ್ಷೆ ಬರೆಯದೇ ನಂತರದ ಪ್ರಯತ್ನದಲ್ಲಿ ಬರೆದಲ್ಲಿ, ಪರೀಕ್ಷಾ ಶುಲ್ಕ ವಿನಾಯಿತಿ ಅರ್ಹತೆ ಇರುವುದಿಲ್ಲ. ನವೆಂಬರ್/ಡಿಸೆಂಬರ್ ಪೂರಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಕಡ್ಡಾಯವಾಗಿ ಪರೀಕ್ಷಾ ಶುಲ್ಕವನ್ನು ಪಾವತಿಸತಕ್ಕದು.**
04. ವಿದ್ಯಾರ್ಥಿಗಳು ಚಾಲ್ತಿಯಲ್ಲಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ಯೋಜನೆಗೆ ಅನುಗುಣವಾಗಿ ಪರೀಕ್ಷೆ ತೆಗೆದುಕೊಳ್ಳಬೇಕು.
05. ವಿದ್ಯಾರ್ಥಿಗಳು ತಮ್ಮ ಸ್ನಾತಕ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಅಂತರ್ಜಾಲ www.ksoumysore.edu.in ನಿಂದ ಪಡೆಯಬಹುದಾಗಿದೆ.

**ಮುಖ್ಯವಾಗಿ ಗಮನಿಸಬೇಕಾದ ಸಂಗತಿ**

ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮೊಬೈಲ್ ಫೋನ್ ಪರೀಕ್ಷಾ ಕೇಂದ್ರಗಳಿಗೆ ತರುವುದು ದುರ್ನಡತೆ **(Malpractice)** ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ.

**ವಿಶೇಷ ಸೂಚನೆ: ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿ ಮತ್ತು ಪ್ರವೇಶ ಪತ್ರವನ್ನು ಕಡ್ಡಾಯವಾಗಿ ಪರೀಕ್ಷೆಗೆ ತರುವುದು.**

**ಸಹಿ/-**

**ಕುಲಸಚಿವ (ಪರೀಕ್ಷಾಂಗ)**

# KARNATAKA STATE OPEN UNIVERSITY
# MUKTHAGANGOTRI, MYSURU – 570006

**No. KSOU/Ex.5/UG/Exam/2009-10** **Date: 21.09.2015**

***CIRCULAR***

***Sub: Payment of B.A/B.Com Supplementary* Examination Fee –November/December-2015**

The last date for payment of examination fee and the amount of examination fee to be paid by the KSOU students for the ensuing November/December – 2015 *Supplementary* Examinations is notified as here under:

**Examination commences from Third Week of November - 2015**

| | |
|---|---|
| **Without penal fee** | **26.10.2015** |
| **With a penal fee of Rs. 200/-** | **30.10.2015** |

**FEE STRUCTURE**

**(Students appearing for the first time will have to pay the fees for the whole examination)**

| Sl. No. | Class | Whole Exam | One Paper | Two Papers | Three Papers | Four Papers | Five Papers and above |
|---|---|---|---|---|---|---|---|
| 1 | I B.A/B.Com | 850-00 | 450-00 | 500-00 | 600-00 | 700-00 | 850-00 |
| 2 | II B.A/B.Com | 850-00 | 450-00 | 500-00 | 600-00 | 700-00 | 850-00 |
| 3 | III B.A/B.Com | 950-00 | 450-00 | 500-00 | 600-00 | 700-00 | 950-00 |

**Note:** As per the university examination regulations, students who are within the time limit of six years from the date of their enrollment are eligible to appear for the ensuing examinations. **Students who have completed more than six(6) years from their enrollment are not eligible to appear for the examination. Inspite of this instruction, if the time barred students pay the examination fee, they will be doing so at their own risk and the amount will not be refunded**. Hence, 2008 - 09 ( Those Studentes have to pay penal fee of Rs-2000/- alonge with the exam fee last chance) and later admitted students are eligible to appear for the ensuing examination. Examinations are proposed to be conducted at the following Places/ Centers

**BELGAVI, BIDAR, BENGALURU, BELLARY, VIJAYAPURA (BIJAPURA), CHAMARAJANAGAR, CHIKAMAGALORE, CHITRADURGA, DAVANAGERE, DHARWAD, KALBURGI(GULBARGA), GADAG, HASSAN, KARWAR , KOLLEGALA, KOLAR , MYSURU, MANDYA , MANGALURU, RAICHUR, SHIMOGGA, , TUMKUR, UDUPI, KUSHALANAGARA.**

Students can select any one of the above Examination Centres. **Once they choose the Examination Centre, the candidate has to take examination in that particular centre alone**. Change of Examination Centre is not allowed. Under special circumstances, permission will be granted on a written request letter to, **The Registrar (Evaluation), Karnataka State Open University, Mukthagangotri, Mysuru – 570 006,** be submitted 15 days prior to the commencement of Examination, on a payment of Rs. 1000/-(One Thousand Only) in additional to the examination fee and penal fee as applicable on or before 30-10-2015.

Students shall remit the fees in the nearby branches of State Bank of Mysore or State Bank of India in the enclosed Examination Form challan. ***Please mention Year of Admission, Roll Number and Name of the Examination Centre on the Top of the Examination Application. Enclose the photo copy of Admission fee paid Challan along with Examination Application. Incomplete Applications are liable to be rejected. Do not tear the original Examination fee paid challan from the Examination Form.***

Students shall submit their filled- in examination applications to **The Registrar (Evaluation), Karnataka State Open University, Mukthagangotri, Mysuru – 570 006, either in person or by Registered Post / Courier**.

**Filled in Examination Applications recived after 30-10-2015 will be rejected without assigning any reasons. Hence, those students are not allowed to write the Examinations. If those students do attempt to appear for the Examinations without the approval of the Cancerned centre Chief of Examinations, they will be doing so at their own risk as the university will not be responsible for their non-announcement of results.**

**INSTRUCTIONS TO THE CANDIDATES**

1. If the total students strength is less than 50 in any examination centre, students who have opted for that centre will be directed to write the examinations at the nearest examination centre. This arrangement will be intimated to the students well in advance.
2. Examination fee once paid will not be refunded nor re-adjusted to the next examination under any circumstances.
3 SC and ST Students who claim the Examination fee concession facility have to appear for the related Examination and pass out compulsorily during their year of admission only. Such students who do not write their related Examination in their year of admission and try in the subsequent appearances will not be eligible for Examination fee concession.The SC/ST Studentes who will appear for Nov/Dec Supplementery Examination have to pay Exam Fee in full Compulsory
4. Candidates shall take the examination as per the syllabus and scheme of the examination supplied along with the prospectus.
5. **Students can download the course-wise Examination Hall Tickets from the University website** www.ksoumysore.edu.in Two days prior to the Commencement of respective Examination.

**IMPORTANT INSTRUCTION**

**Carrying of mobile phones into the examination hall is strictly prohibited. Carrying of mobile phones into the examination hall amounts to malpractice. Action will be taken against such erring candidates. Candidates should bring photo identity card issued by the University to the Examination hall compulsorily.**

**Sd/-**

**REGISTRAR (EVALUATION)**